ಬುಧವಾರ, 3 ಜನವರಿ 2018 | ಪುಟಗಳು: 12+6+4 | ಬೆಲೆ: ₹ 5.00

ಹುಬ್ಬಳ್ಳಿ | ಬೆಂಗಳೂರು | ಮಂಗಳೂರು | ಮೈಸೂರು | ಶಿವಮೊಗ್ಗ | ಚಿತ್ರದುರ್ಗ | ಕಲಬುರಗಿ | ಬಾಗ

PRIDE

ವಿಜಯ ಕರ್ನಾಟಕ

ಬನವಾಸಿ ಭಾಗದ ಕೆರೆಗಳ ಪುನರುಜ್ಜೀವನ: ಪುನರು ನಳನಳಿಸುವ ನಿರೀಕ್ಷೆ

ಒಣಗಿದ ಕೆರೆ ತುಂಬುವ ಸಮಯ

■ ಕೃಷ್ಣಮೂರ್ತಿ ಟಿ.ಕೆರೆಗದ್ದೆ ಶಿರಸಿ

ಅರೆಬಯಲುಸೀಮೆ ಪ್ರದೇಶವಾದ ಬನವಾಸಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೆರೆಗಳಿಗೇನೂ ಕಡಿಮೆಯಿಲ್ಲ ಆದರೆ ಬಹುತೇಕ ಕೆರೆಗಳು ಬೇಸಿಗೆಯಲ್ಲಿ ಆಟದ ಮೈದಾನದಂತಾಗುವುದೇ ಹೆಚ್ಚು. ಇಂತಹ ಕೆರೆಗಳನ್ನು ಪುನರುಜ್ಜೀವನಗೊಳಿಸುವಂತಹ ಕಾರ್ಯ ಇದೀಗ ಆರಂಭವಾಗಿದೆ. ಇದರಿಂದ ಮುಂಬರುವ ವರ್ಷಗಳಲ್ಲಿ ರೈತರಲ್ಲಿ ಹಸಿರು ನಳನಳಿಸುವ ನಿರೀಕ್ಷೆ ಮೂಡುವಂತಾಗಿದೆ.

9 ಕೆರೆ ಹೂಳೆತ್ತಲು ಮುಂದಾದ ಮನು ವಿಕಾಸ ಸಂಸ್ಥೆ

ಜ.28ಕ್ಕೆ ಟೆಂಡರ್ ಓಪನ್

ಸರಕಾರದಿಂದ 39 ಕೆರೆಗಳಿಗೆ ಹರಿಯಲಿದೆ ವರದೆ ನೀರು

ಕೃಷಿ ಪೂರಕ ಚಟುವಟಿಕೆಯಲ್ಲಿ ತೊಡಗಿರುವ ಮನುವಿಕಾಸ ಸಂಸ್ಥೆ ಇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಈ ಭಾಗದ ದೊಡ್ಡದಾದ 9 ಸರಕಾರಿ ಕೆರೆಗಳನ್ನು ಸರಕಾರದ ಅನುಮತಿ ಪಡೆದು ಹೂಳೆತ್ತುವುದಕ್ಕೆ ಮುಂದಾಗಿದೆ. ಮೊದಲ ಹಂತದಲ್ಲಿ ಹಾಡಲಗಿ-ಮಧುರವಳ್ಳಿ ಭಾಗದ ಮೂರು ಕೆರೆಗಳನ್ನು ಪುನರುಜ್ಜೀವನಗೊಳಿಸುವುದಕ್ಕೆ ಅಣಿಯಾಗಿದೆ. ಇನ್ನೊಂದೆಡೆ ಸರಕಾರ ಪೂರ್ವ ಭಾಗದ 39ಕೆರೆಗಳಿಗೆ ವರದೆಯ ನೀರನ್ನು ತುಂಬಿಸುವ ಕಾರ್ಯಕ್ಕೂ ಯೋಜಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕದಂಬೋತ್ಸವಕ್ಕೆ ಆಗಮಿಸುವ ಸಂದರ್ಭದಲ್ಲಿ ಇದಕ್ಕೆ ಶಂಕುಸ್ಥಾಪನೆ ನೆರವೇರಿಸುವ ಸಾಧ್ಯತೆಗಳಿದೆ. ಇವೆಲ್ಲವೂ ಸಮರ್ಪಕವಾಗಿ ಸಾಕಾರಗೊಂಡರೆ ಒಂದೆರಡು ವರ್ಷದಲ್ಲಿ ಅರೆಬಯಲುಸೀಮೆಯ ಒಂದಿಷ್ಟು ಪ್ರದೇಶ ಅಂತರ್ಜಲ, ನೀರಾವರಿ ಪ್ರದೇಶವಾಗಿ

ಹೂಳೆತ್ತಲಾಗುವ ಬನವಾಸಿ ಭಾಗದ ಹಾಡಲಗಿ-ಮಧುರವಳ್ಳಿಯ ಕೆರೆ.

ಸಂಘ ಸಂಸ್ಥೆಗಳ ಸಹಯೋಗದಲ್ಲಿ

ಬನವಾಸಿ ಭಾಗದ 9 ಸರಕಾರಿ ಕೆರೆ ಪುನರುಜ್ಜೀವನ ಕೈಗೊಳ್ಳಲು ಮನುವಿಕಾಸ ಸಂಸ್ಥೆಗೆ ವಿವಿಧ ಸಂಘ ಸಂಸ್ಥೆಗಳ ನೆರವು ದೊರೆತಿದೆ. ಮೊದಲ ಹಂತದಲ್ಲಿ ಹೊಸಕಟ್ಟೆಯ 6.3ಎಕರೆ ಕೆರೆಯ 11ಸಾವಿರ ಕ್ಯೂಬಿಕ್ ಮೀಟರ್ ಮಣ್ಣನ್ನು ಮೇಲೆತ್ತಲಿದೆ. ಇದರಿಂದ 11ಮಿಲಿಯನ್ ಲೀಟರ್ ನೀರು ಸಂಗ್ರಹವಾಗಬಹುದಾಗಿದೆ. ಅಂಚಿನ ಮಲ್ಲನಕಟ್ಟೆ 5.17ಎಕರೆ ಕೆರೆಯಲ್ಲಿ 17ಸಾವಿರ ಕ್ಯೂಬಿಕ್ ಮೀಟರ್ ಮಣ್ಣನ್ನು ತೆಗೆಯಲಿದ್ದು 17.55ಮಿಲಿಯನ್ ಲೀಟರ್ ನೀರು ಸಂಗ್ರಹವಾಗುವ ಅಂದಾಜಿದೆ. ಹಾಗೇ ಹಾಡಲಗಿ-ಮಧುವರಳ್ಳಿ ಕೆರೆಯ 22.5ಎಕರೆ ಜಾಗದ ಹೂಳನ್ನು ತೆಗೆಯುತ್ತಿದ್ದು ಒಟ್ಟು 27ಲಕ್ಷ ರೂ.ವೆಚ್ಚ ಮಾಡಲಾಗುತ್ತಿದೆ ಎಂದು ಮನುವಿಕಾಸ ಸಂಸ್ಥೆಯ ಸಂಚಾಲಕ ಗಣಪತಿ ಭಟ್ಟ ಹೇಳುತ್ತಾರೆ. ಇನ್ನುಳಿದಂತೆ ಗುಡ್ಡಾಪುರ, ನರೂರು, ಕಪ್ಪಗೆರೆ, ತಿಗಣಿ ಕಂತ್ರಾಜಿ ಭಾಗದ ಕೆರೆಯನ್ನು ಹೂಳು ತೆಗೆಯುವುದಕ್ಕೆ ಯೋಜಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕೆರೆ ತುಂಬುವುದಕ್ಕೆ ಟೆಂಡರ್ ಓಪನ್

ಬರಗಾಲದ ಛಾಯೆಯಿಂದ ನರಳುತ್ತಿದ್ದ ಬನವಾಸಿ ಭಾಗದ ರೈತರಿಗೆ ಶಾಶ್ವತ ನೀರಿನ ಭಾಗ್ಯ ಕರುಣಿಸುವುದಕ್ಕೆ ಯೋಜನೆ ರೂಪಿಸಲಾಗಿದೆ. 2014-15ರ ಮುಂಗಡಪತ್ರದಲ್ಲಿ ಘೋಷಿಸಿದಂತೆ ಕೆರೆಗಳಿಗೆ ನೀರು ತುಂಬುವ ಕಾರ್ಯಕ್ಕೆ ಮುಂದಾಗಲಾಗುತ್ತಿದೆ. ಈ ಭಾಗದ 39ಕೆರೆಗಳಿಗೆ ನೀರು ತುಂಬುವುದಕ್ಕೆ ಟೆಂಡರ್ ಪ್ರಕ್ರಿಯೆ ಆಗಿದ್ದು ಜ.28ರಂದು ಟೆಂಡರ್ ಓಪನ್ ಮಾಡಲಾಗುತ್ತಿದೆ. 64ಕೋಟಿ ವೆಚ್ಚದ ಕಾಮಗಾರಿ ಇದಾಗಿದ್ದು ಕೆರೆಗಳಿಗೆ ತುಂಬಿಸುವುದಕ್ಕೆ 39ಕಿ.ಮೀ ಕಾಲುವೆ ನಿರ್ಮಿಸಲಾಗುತ್ತದೆ. ಮಳೆಗಾಲದಲ್ಲಿ ಮತ್ತು ಬೇಸಿಗೆಯಲ್ಲಿ ಎರಡು ಬಾರಿ ನದಿಯ ನೀರನ್ನು ಕೆರೆಗಳಿಗೆ ಹಾಯಿಸುವ ಯೋಚನೆಯಿದ್ದು ಒಂದೂವರೆ ವರ್ಷದಲ್ಲಿ ಪೂರ್ಣಗೊಳ್ಳಬಹುದಾಗಿದೆ ಎಂದು ಯಲ್ಲಾಪುರ-ಮುಂಡಗೋಡ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ ಹೇಳುತ್ತಾರೆ.

ಕೆರೆಗಳಿಗೆ ವರದಾ ನದಿ ನೀರನ್ನು ತುಂಬಿಸುವ ಯೋಜನೆಗೆ ಟೆಂಡರ್ ಪ್ರಕ್ರಿಯೆ ಸದ್ಯವೇ ಅಂತಿಮಗೊಳ್ಳುತ್ತಿದೆ. ಮುಂದಿನ ಒಂದೂವರೆ ವರ್ಷದಲ್ಲಿ ಯೋಜನೆ ಪೂರ್ಣಗೊಳ್ಳುವ ವಿಶ್ವಾಸವಿದೆ.

-ಶಿವರಾಮ ಹೆಬ್ಬಾರ ಶಾಸಕ